## ವನವಾಸಿ ಗಣಪ



ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ನಗರದ ಸೆರಗಿನಲ್ಲಿ ಹಳೆಕೋಟೆ ಎಂಬ ಐತಿಹಾಸಿಕ ಮಹತ್ವದ ಪುಟ್ಟ ಊರಿದೆ. ರಾಜರಸ್ತೆಯ ಬಲಬದಿಗೆ ಅರ್ಧ ಎಕರೆ ವಿಸ್ತಾರದ ಒಂದು ನಾಗಬನ ಇದೆ. ಒಂದಾನೊಂದು ಕಾಲದಲ್ಲಿ ಕಾಡು ಬೆಳೆದು ಅಭೇದ್ಯವಾಗಿದ್ದ ಈ ಬನದಲ್ಲಿ ಹಲವಾರು ನಾಗನ ಕಲ್ಲುಗಳು, ಬ್ರಹ್ಮ ಯಕ್ಷ ವಿಗ್ರಹಗಳು, ಪಾಣಿಪೀಠ, ನಂದಿವಿಗ್ರಹಗಳಲ್ಲದೆ ಪ್ರಸನ್ನವದನನಾದ ಗಣಪತಿಯ ಮೂರ್ತಿಯಿದೆ. ತೀರ್ಥಬಾವಿ, ಕೆತ್ತನೆ ಕೆಲಸಗಳಿರುವ ಶಿಲಾಫಲಕಗಳು ಅಲ್ಲಲ್ಲಿ ಚದುರಿ ಬಿದ್ದಿವೆ. ನಡವೆ ಮಣ್ಣಿನ ದಿಬ್ಬವೊಂದಿದ್ದು ನೂರಾರು ವರ್ಷಗಳ ಹಿಂದೆ  ಶಿವಾಲಯ ಇದ್ದ ಎಲ್ಲ ಕುರುಹುಗಳೂ ಕಂಡು ಬರುತ್ತವೆ.

ಕನ್ನಡ ಮಾತೃಭಾಷೆಯ ಹೆಗ್ಡೆ ಕುಲಕ್ಕೆ (ಮಾಳವ) ಸಂಬಂಧಪಟ್ಟ ಈ ಅಜ್ಞಾತ ದೇಗುಲಕ್ಕೆ  ಭಕ್ತರೊಬ್ಬರು ಸ್ವಯಂ ಪ್ರೇರಣೆಯಿಂದ ದಿನವೂ ಬೆಳಿಗ್ಗೆ ಬಂದು ಗುಡಿಸಿ ಸ್ವಚ್ಛ ಮಾಡಿ ಹಳೆಹೂವುಗಳನ್ನು ತೆಗೆದು ಹೊಸ ಹೂವುಗಳನ್ನು ದೇವರ ಮುಡಿಗೇರಿಸಿ ತಮ್ಮ ಭಕ್ತಿಯ ಅನುಸಾರ ಪೂಜೆ ಸಲ್ಲಿಸಿ ಹೋಗುತ್ತಾರೆ. ಸುತ್ತಮುತ್ತಲಿನ ಮನೆಗಳ ಪುಟ್ಟಮಕ್ಕಳು ಅವರಿಗೆ ಸಹಕಾರ ನೀಡುತ್ತಾರೆ. ಸೂರ್ಯನ ಹೊಂಬೆಳಕಿನಲ್ಲಿ ಮಿಂದ ವಿಘ್ನರಾಜ ಪ್ರಕೃತಿಯ ಮಡಿಲಲ್ಲಿ ಶೋಭಿಸುತ್ತಿರುವ ದೃಶ್ಯವನ್ನು ಇಲ್ಲಿ ಕಾಣಬಹುದಾಗಿದೆ.

ಚಿತ್ರ- ಬರಹ: **ಡಾ. ವೇಣುಗೋಪಾಲ ಶರ್ಮಾ, ಗುರುವಾಯನಕೆರೆ**



## ಕಾವೇರಿ ಮೂಲದಲ್ಲೇ ಬಂದ್!

ಎರಡು ರಾಜ್ಯಗಳ ನಡುವೆ ಕಾವೇರಿ ನೀರಿಗಾಗಿ ಕಾನೂನು ಸಮರವೇ ನಡೆಯುತ್ತಿದೆ. ಆದರೆ ತಾಯಿ ಕಾವೇರಿಗೆ ಅವಳ ಹುಟ್ಟಿದ ಸ್ಥಳದಲ್ಲೇ (ತಲಕಾವೇರಿಯಲ್ಲಿ) ಸರಿಯಾಗಿ ಹರಿದು ಬರಲಾಗದಂತೆ ನಾಣ್ಯಗಳಿಂದ ಮುಚ್ಚಿದ್ದಾರೆ. ಬ್ರಹ್ಮಕುಂಡದಲ್ಲಿ ಉದ್ಭವಿಸುವ ಕಾವೇರಿ ಗೋಮುಖದಲ್ಲಿ ಸರಾಗವಾಗಿ ಹರಿದು ಬರಬೇಕು. ಆದರೆ ಭಕ್ತಾದಿಗಳು ನಾಣ್ಯಗಳನ್ನು ಸುರಿದು ಕಾವೇರಿ ಹೊರಬರಲಾಗದಂತೆ ಬಂಧಿಸಿದ್ದಾರೆ.

**- ಬಿ. ಶೋಭಾ ಅರಸ, ಕುಂದಾಪುರ**

## ಚೋಟುದ್ದ ಗೀಜರ್

ಈ ದಿನಗಳಲ್ಲಿ ಬಿಸಿನೀರಿನ ಸ್ನಾನ ಮಾಡಲು ಮನೆಮಂದಿಗೆಲ್ಲಾ ಎಂದು 10–15 ಲೀಟರ್ ದೊಡ್ಡ ಗೀಜರ್ ಹಾಕಿಸುತ್ತಾರೆ. ಆದರೆ ಒಬ್ಬರೋ ಇಬ್ಬರೋ ಇರುವವರಿಗೆ ದೊಡ್ಡ ಗೀಜರ್ ಅನಾವಶ್ಯಕ ಹಾಗೂ ವೆಚ್ಚದಾಯಕ. ಅಂಥವರಿಗೆಂದು ಇಲ್ಲಿದೆ 'ಚೋಟುದ್ದ ಗೀಜರ್'.

ಒಂದು ಬದಿಯಿಂದ  ಸರಾಗವಾಗಿ ಹರಿದು ಬರುವ ನಲ್ಲಿ ನೀರಿಗೆ ಗೀಜರ್ ಪೈಪು ಜೋಡಿಸಬೇಕು. ಗೀಜರ್‌ನ ಕರೆಂಟ್ ಸ್ವಿಚ್ ಹಾಕಿದ 2 ನಿಮಿಷದಲ್ಲೇ ಬಿಸಿ ನೀರು ಬರಲು ಆರಂಭ. 10–15 ನಿಮಿಷದಲ್ಲಿ ಒಬ್ಬರಿಗೆ ಬೇಕಾಗುವಷ್ಟು ಬಿಸಿ ನೀರಿಂದ ಬಕೆಟ್ ತುಂಬುತ್ತದೆ. ಶಾಲಾ– ಕಾಲೇಜು ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಮತ್ತು ಒಂದಿಬ್ಬರು ಇರುವವರಿಗೆ ಇದು ಉಪಯುಕ್ತ.

**-ಅನುರಾಧ ಟಿ., ದಾವಣಗೆರೆ**

